# ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991.

**ಪ್ರಕರಣಗಳ ಕ್ರಮಪಟ್ಟಿ**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು

1. ಚಿಕ್ಕ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಸಕ್ರಮಗೊಳಿಸುವುದು.
4. ಸಕ್ರಮಗೊಳಿಸಬಾರದ ಅನಧಿಕೃತ ನಿರ್ಮಾಣಗಳು.
5. ಸಕ್ರಮಗೊಳಿಸುವುದಕ್ಕೆ ಷರತ್ತುಗಳು.
6. ಸಕ್ಷಮ ಪ್ರಾಧಿಕಾರಿ.
7. ಮೊಬಲಗಿನ ಸಂದಾಯ ಮತ್ತು ಭೂಮಿಯ ನೀಡಿಕೆ.
8. ಸಕ್ರಮಗೊಳಿಸದ ಅನಧಿಕೃತ ನಿರ್ಮಾಣಗಳನ್ನು ಕೆಡವಬೇಕು.

8ಎ. ಡಿವಿಜನಲ್ ಕಮೀಷನರಿಂದ ಪರಿಶೀಲನೆ.

9. ನಿಯಮಗಳ ರಚನಾಧಿಕಾರ.
10. ತೊಂದರೆಗಳ ನಿವಾರಣೆ.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**1991ರ ಅಧಿನಿಯಮ 29.**- ನಗರ ಪ್ರದೇಶಗಳಲ್ಲಿ ಅಳತೆಮೀರಿ ಹೆಚ್ಚಿರುವ ಅನಧಿಕೃತ ನಿರ್ಮಾಣಗಳಿಂದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರ ಸ್ಥಳೀಯ ಪ್ರಾಧಿಕಾರಗಳಿಗೆ, ಮನೆ ನಿವೇಶನಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವುದು ಕಷ್ಟವಾಗುತ್ತಿದೆ. ಹಲವಾರು ವರ್ಷಗಳ ಅವಧಿಯಲ್ಲಿ ಈಗಾಗಲೇ ನಿರ್ಮಿಸಿರುವ ಅನಧಿಕೃತ ನಿರ್ಮಾಣಗಳನ್ನು ಕೆಡಹುವುದು ಸಾಧ್ಯವಿಲ್ಲ ಮತ್ತು ಸಾರಾಸಗಟು ಕೆಡಹುವಿಕೆಯಿಂದ ರಾಷ್ಟ್ರೀಯ ಸಂಪತ್ತಿನ ಹಾನಿ ಮಾತ್ರವಲ್ಲ ಕೆಲವು ಸಂದರ್ಭಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳು ಉದ್ಭವಿಸಬಹುದಾಗಿದೆ. ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕೆಲವೊಂದು ರೀತಿಯ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದ್ಕಕಾಗಿ ಒಂದು ಸಮಗ್ರ ಶಾಸನವನ್ನು ರಚಿಸುವುದು ಅಗತ್ಯವೆಂದು ಭಾವಿಸಲಾಯಿತು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ)ಭಾಗ 4-2ಎ ಸಂಖ್ಯೆ 611 ದಿನಾಂಕ 25.9.1991)

## II

**1994ರ ತಿದ್ದುಪಡಿ ಅಧಿನಿಯಮ 9.-** (i) ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಂಡ ಅನಧಿಕೃತ ನಿರ್ಮಾಣಗಳನ್ನು ಮತ್ತು ರಾಜ್ಯ ಸರ್ಕಾರಕ್ಕೆ ಸೇರಿದ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಭೂಮಿಯಲ್ಲಿರುವ ಯಾವುವೇ ಅನಧಿಕೃತ ನಿರ್ಮಾಣಗಳನ್ನು ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಒಡೆತನ ಅಥವಾ ನಿಯಂತ್ರಣ ಹೊಂದಿರುವ ಯಾವುದೇ ಕಂಪನಿಯ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಭೂಮಿಯ ಮೇಲೆ ನಿರ್ಮಿಸಲಾದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಸೌಲಭ್ಯದಿಂದ ಬಿಟ್ಟುಬಿಡುವುದು.

(ii) ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸುವುದಕ್ಕೆ ಕಾಲ ಮಿತಿಯನ್ನು ಅರವತ್ತು ದಿನಗಳಿಂದ ಮೂರು ವರ್ಷಗಳವರೆಗೆ ವಿಸ್ತರಿಸುವುದು.

(iii) ಪರಿಶೀಲನಾ ಸಮಿತಿಯಲ್ಲಿ ರಾಜ್ಯ ವಿಧಾನಮಂಡಲದ ಸದಸ್ಯರಿಗೆ ಮತ್ತು ಅನುಸೂಚಿತ ಜಾತಿ, ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ಮತ್ತು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡುವುದು.

(iv) ಬೆಂಗಳೂರು ನಗರದ ಮಹಾನಗರ ಪಾಲಿಕೆಯ ಪರಿಮಿತಿಗಳೊಳಗಿನ ಪ್ರದೇಶವನ್ನು ಹೊರತುಪಡಿಸಿ ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಒಂದು ಮತ್ತು ಬೆಂಗಳೂರು ನಗರದ ಮಹಾನಗರ ಪಾಲಿಕೆಯ ಪರಿಮಿತಿಗಳೊಳಗಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಮತ್ತೊಂದು ಹೀಗೆ ಎರಡು ಪರಿಶೀಲನಾ ಸಮಿತಿಗಳನ್ನು ರಚಿಸುವುದು.

(v) ಸಕ್ರಮಗೊಳಿಸಿರದ ಅನಧಿಕೃತ ನಿರ್ಮಾಣಗಳಿಗೆ ನೀರು ಮತ್ತು ವಿದ್ಯುಚ್ಛಕ್ತಿ ಪೂರೈಕೆಯನ್ನು ಕಡಿತ ಮಾಡಲು ಉಪಬಂಧ ಕಲ್ಪಿಸುವುದು, ಮತ್ತು

(vii) ಪರಿಶೀಲನಾ ಸಮಿತಿಯು ಮಾಡಿದ ಆದೇಶ ಅಥವಾ ದಾಖಲಿಸಿದ ನಡವಳಿಯ ಮೇಲೆ ರಾಜ್ಯ ಸರ್ಕಾರವು ಪುನರೀಕ್ಷಿಸಲು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

(1993ರ ಕರ್ನಾಟಕ ವಿಧಾನಸಭಾ ವಿಧೇಯಕ ಸಂಖ್ಯೆ 46ರಲ್ಲಿದ್ದಂತೆ.)

## III

**1994ರ ತಿದ್ದುಪಡಿ ಅಧಿನಿಯಮ 29.-** ಕರ್ನಾಟಕ ನಗರ ಪ್ರದೇಶಗಳಲ್ಲಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991ನ್ನು ಈ ಮುಂದಿನ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು,-

(i) 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯನ್ನು ಸಕ್ರಮಗೊಳಿಸುವುದಕ್ಕಾಗಿ ಅರ್ಜಿ ಸಲ್ಲಿಸಲು ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ, 1994ರ ಆಕ್ಟೋಬರ್ 1ನೇ ದಿನಾಂಕದವರೆಗೆ ವಿಸ್ತರಿಸುವುದು.

(ii) ಪೌರ ನಿಗಮದ ಆಯುಕ್ತರನ್ನು ಪೌರನಿಗಮಗಳು ಇರುವಂಥ ಜಿಲ್ಲೆಗಳ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುವುದು.

ಆದ್ದರಿಂದ ಈ ವಿಧೇಯಕ.

(1994ರ ವಿಧಾನಸಭಾ ವಿಧೇಯಕ ಸಂಖ್ಯೆ 20 ಕಡತಸಂಖ್ಯೆ ಐಂಫಾ 58 ಐಲುಓ 94 ರಲ್ಲಿದ್ದಂತೆ)

## IV

**1995ರ ತಿದ್ದುಪಡಿ ಅಧಿನಿಯಮ 27**.- ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ:-

(i) 1995ರ ಜನವರಿ 1ನೇ ದಿನಾಂಕವೂ ಸೇರಿದಂತೆ ಆ ದಿನಾಂಕದವರೆಗೆ ನಿರ್ಮಾಣ ಮಾಡಿದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಮತ್ತು ಹಾಗೆ ಸಕ್ರಮಗೊಳಿಸಲು ಅರ್ಜಿ ಸಲ್ಲಿಸುವ ದಿನಾಂಕವನ್ನು 1994ನೇ ಆಕ್ಟೋಬರ್ 1ನೇ ದಿನಾಂಕದಿಂದ 1995ರ ಆಕ್ಟೋಬರ್ 1ನೇ ದಿನಾಂಕದವರೆಗೆ ವಿಸ್ತರಿಸಲು ಉಪಬಂಧ ಕಲ್ಪಿಸುವುದು;

(ii) ಒಂದು ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರಲ್ಲಿ ನಿಹಿತವಾಗಿರುವಂಥ ಮತ್ತು 1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಅಡಿಯಲ್ಲಿ ಅಥವಾ 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಅಡಿಯಲ್ಲಿ ಅಥವಾ 1976ರ ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮದ ಅಡಿಯಲ್ಲಿ ಆರ್ಜನೆಗಾಗಿ ಅಧಿಸೂಚಿತವಾಗಿರುವ ಭೂಮಿಯ ಮೇಲಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಸೌಲಭ್ಯದಿಂದ ಬಿಟ್ಟುಬಿಡುವುದು.

(iii) 1964ರ ಕರ್ನಾಟಕ ಭೂಕಂದಾಯ ಅಧಿನಿಯಮದಡಿಯಲ್ಲಿ ಹಸಿರು ಪಟ್ಟಿ ಪ್ರದೇಶವೆಂದು ಘೋಷಿತವಾಗಿರುವ ಅಂಥ ಪ್ರದೇಶದಲ್ಲಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉಪಬಂಧ ಕಲ್ಪಿಸುವುದು.

(iv) ಕಟ್ಟಡಗಳ ನಿರ್ಮಾಣಕ್ಕೆ ಅನ್ವಯವಾಗುವ ಯಾವುವೇ ನಿಯಮಗಳು, ಉಪ-ವಿಧಿಗಳು ಅಥವಾ ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಅಗತ್ಯವಾದ ನಿಗದಿತ ಆಳತೆಗಳೊಳಗೆ ಬರುವಂಥ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉಪಬಂಧ ಕಲ್ಪಿಸುವುದು.

(v) ಎರಡು ಅಂತಸ್ತುಗಳಿಗಿಂತ ಹೆಚ್ಚು ಅಂತಸ್ತುಗಳಿರುವ ಕಟ್ಟಡಗಳ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉಪಬಂಧ ಕಲ್ಪಿಸುವುದು.

(vi) ವಾಣಿಜ್ಯ ಉದ್ದೇಶಗಳಿಗಾಗಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉಪಬಂಧ ಕಲ್ಪಿಸುವುದು.

(vii) 1985ರ ಕರ್ನಾಟಕ ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಬಯಲು ಜಾಗಗಳ (ಸಂರಕ್ಷಣೆ ಮತ್ತು ವಿನಿಯಮನ) ಅಧಿನಿಯಮವನ್ನು ಉಲ್ಲಂಘಿಸಿ ಮಾಡಲಾದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉಪಬಂಧ ಕಲ್ಪಿಸುವುದು.

(viii) ಪರಿಶೀಲನಾ ಸಮಿತಿಗೆ ಸಂಬಂಧಿಸಿದ ಉಪಬಂಧಗಳನ್ನು ಪ್ರತಿಯೋಜಿಸುವ ಮೂಲಕ, ಅಧಿನಿಯಮದ ಉದ್ದೇಶಕ್ಕಾಗಿ ಸಕ್ರಮ ಪ್ರಾಧಿಕಾರಿಯನ್ನು ನೇಮಕ ಮಾಡಲು ಉಪಬಂಧ ಕಲ್ಪಿಸುವುದು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ಅಧ್ಯಾದೇಶ, 1995ನ್ನು ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(1995ನೇ ವಿಧಾನಸಭಾ ವಿಧೇಯಕ ಸಂಖ್ಯೆ 23ರಲ್ಲಿದ್ದಂತೆ)

## V

**2007ರ ತಿದ್ದುಪಡಿ ಅಧಿನಿಯಮ 17.**- ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 9 ಬಿಎಂಎಂ 2003, ದಿನಾಂಕ: 8.9.2005ರಲ್ಲಿ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂಗಳಲ್ಲಿ ಪ್ರಾದೇಶಿಕ ಕಮೀಷನರುಗಳ ಹುದ್ದೆಗಳನ್ನು ಹಾಗೂ ಅವರಿಗೆ ಸಹಾಯಕ ಸಿಬ್ಬಂದಿಯ ಹುದ್ದೆಗಳನ್ನು ಸೃಜನೆ ಮಾಡಲಾಗಿದೆ.

ಸಂಬಂಧಪಟ್ಟ ಅಧಿನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಮಾಡಿ ಪ್ರಾದೇಶಿಕ ಕಮೀಷನರುಗಳಿಗೆ, ಶಾಸನಬದ್ಧ ಅಧಿಕಾರಗಳನ್ನು ಕೊಡಬೇಕಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲವು ಅಧಿವೇಶನದಲ್ಲಿಲ್ಲದೇ ಇದ್ದುದರಿಂದ ಕರ್ನಾಟಕ ಭೂ-ಕದಂದಾಯ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2006 (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5)ನ್ನು ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 7)

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 18ನೆಯ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

# 1991ರ ಕರ್ನಾಟಕ ಅಧಿನಿಯಮ ಸಂಖ್ಯೆ 29

1991ರ ನವೆಂಬರ್ 8ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ).

## ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991.

1991ರ ನವೆಂಬರ್ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

(1994ರ 9, 1994ರ 29, 1995ರ 27 ಮತ್ತು 2007ರ 17ನೇ ಅಧಿನಿಯಮಗಳಿಂದ ತಿದ್ದುಪಡಿಯಾದಂತೆ).

**ನಗರ ಪ್ರದೇಶಗಳಲ್ಲಿರುವ ಕೆಲವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ನಗರ ಪ್ರದೇಶಗಳಲ್ಲಿರುವ ಕೆಲವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ: -

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಅಧಿಸೂಚನೆಯ ಮೂಲಕ ದಿನಾಂಕ: 1.8.1992 ರಿಂದ ಜಾರಿಗೊಂಡಿದೆ. ಅಧಿಸೂಚನೆಯ ಪ್ರತಿ ಅಧಿನಿಯಮದ ಕೊನೆಯಲ್ಲಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಪ್ರಾಧಿಕಾರ" ಎಂದರೆ,-

(i) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12)ರ ಅಡಿಯಲ್ಲಿ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; ಅಥವಾ

(ii) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರ; ಅಥವಾ

(iii) ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 11) ರ ಅಡಿಯಲ್ಲಿ ಸ್ಥಾಪಿತವಾದ ಒಂದು ಸುಧಾರಣಾ ಮಂಡಲಿ;

[1][(1ಎ) “ಸಕ್ಷಮ ಪ್ರಾಧಿಕಾರಿ” ಎಂದರೆ 6ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಸಕ್ಷಮ ಪ್ರಾಧಿಕಾರಿ.]1

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಸೇರಿಸಲಾಗಿದೆ.

(2) “ನಿರ್ಮಾಣ” ಎಂದರೆ ಯಾವುದೇ ಖಾಯಂ ನಿರ್ಮಿತಿ;

(3) ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ‘ಕುಟುಂಬ’ ಎಂದರೆ ಒಬ್ಬ ವ್ಯಕ್ತಿ, ಸಂದರ್ಭಾನುಸಾರ, ಅಂಥ ವ್ಯಕ್ತಿಯ ಪತ್ನಿ ಅಥವಾ ಪತಿ ಮತ್ತು ಅವರ ಅವಿವಾಹಿತ ಅಪ್ರಾಪ್ತ ವಯಸ್ಕ ಮಕ್ಕಳು;

(4) “ಖಾಯಂ ನಿರ್ಮಿತಿ” ಎಂದರೆ ಕಲ್ಲು, ಇಟ್ಟಿಗೆಗಳು, ಮರ, ಮಣ್ಣು, ಲೋಹದಿಂದಾಗಲಿ ಅಥವಾ ಯಾವುದೇ ಇತರ ಸಾಮಗ್ರಿಯಿಂದಾಗಲಿ ರಚಿತವಾದ ಯಾವುದೇ ಕಟ್ಟಡ;

(5) “ರೆವಿನ್ಯೂ ನಿವೇಶನ” ಎಂದರೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 95ನೇ ಪ್ರಕರಣಕ್ಕೆ ಅನುಸಾರವಾಗಿ ಪರಿವರ್ತಿತವಾಗಿರದ ಭೂಮಿಯ ಮೇಲೆ ಪಟ್ಟಣ ಅಥವಾ ಗ್ರಾಮಾಂತರ ಯೋಜನೆಗೆ ಅಥವಾ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಪಟ್ಟ ಸುಸಂಗತ ಕಾನೂನಿನ ಅಡಿಯಲ್ಲಿ ಅನುಮೋದನೆಯಿಲ್ಲದೆ ರೂಪಗೊಂಡ ಒಂದು ನಿವೇಶನ;

(6) 1[ x x x]1

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಬಿಟ್ಟುಬಿಡಲಾಗಿದೆ.

(7) “ಅನಧಿಕೃತ ನಿರ್ಮಾಣ” ಎಂದರೆ ಕಟ್ಟಡದ ಲೈಸೆನ್ಸನ್ನು ಪಡೆಯದೆ ರಚಿತವಾದ ಅಥವಾ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನೆಗೆ ಅಥವಾ ಕಟ್ಟಡದ ನಿರ್ಮಾಣಕ್ಕೆ ಸಂಬಂಧಪಟ್ಟ ಯಾವುದೇ ಕಾನೂನಿನ ಉಲ್ಲಂಘನೆಯಲ್ಲಿ ನೀಡಲಾದ ಒಂದು ಕಟ್ಟಡದ ಲೈಸೆನ್ಸನ್ನು ಪಡೆದ ತರುವಾಯ ಕಟ್ಟಲಾದ ಯಾವುದೇ ನಿರ್ಮಾಣ; 1[ಮತ್ತು ಅದಕ್ಕೆ ಹೊಂದಿಕೊಂಡಿರುವ ನಿರ್ದಿಷ್ಟಪಡಿಸಬಹುದಾದ ಗರಿಷ್ಠ ವ್ಯಾಪ್ತಿಯನ್ನು ಮೀರದ ಭೂಮಿಯನ್ನು ಒಳಗೊಳ್ಳುತ್ತದೆ.]1

1. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಸೇರಿಸಲಾಗಿದೆ.

(8) “ನಗರ ಪ್ರದೇಶ” ಎಂದರೆ,-

(i) ಕರ್ನಾಟಕ ಪುರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ ಅಡಿಯಲ್ಲಿ ಘೋಷಿಸಲಾದ ಒಂದು ನಗರ ಪುರಸಭೆ ಅಥವಾ ಪಟ್ಟಣ ಪುರಸಭೆಯ ಪರಿಮಿತಿಗಳೊಳಗಿರುವ ಯಾವುದೇ ಪ್ರದೇಶ;

(ii) ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 11)ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ಸುಧಾರಣಾ ಮಂಡಲಿಯ ಪರಿಮಿತಿಗಳೊಳಗಿರುವ ಯಾವುದೇ ನಗರ ಪ್ರದೇಶ;

(iii) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12)ರಲ್ಲಿ ಪರಿಭಾಷಿಸಲಾದಂಥ ಬೆಂಗಳೂರು ಮಹಾನಗರ ಪ್ರದೇಶ;

(iv) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರಲ್ಲಿ ಪರಿಭಾಷಿಸಲಾದಂಥ ಯಾವುದೇ ನಗರ ಪ್ರದೇಶ.

-ಮತ್ತು ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪೂರ್ವೋಕ್ತ ಪ್ರದೇಶಕ್ಕೆ ಹೊಂದಿಕೊಂಡ ಅಂಥ ಇತರ ಪ್ರದೇಶವನ್ನು ಒಳಗೊಳ್ಳುತ್ತದೆ.

**3. ಸಕ್ರಮಗೊಳಿಸುವುದು.**- ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆದರೆ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದವುಗಳನ್ನು ಹೊರತುಪಡಿಸಿ, [1][1995ರ ಜನವರಿ ಒಂದನೇ ದಿನಾಂಕಕ್ಕೆ][1] ಮುಂಚಿತವಾಗಿ ಯಾವೊಬ್ಬ ವ್ಯಕ್ತಿಯು,-

(i) ರಾಜ್ಯ ಸರ್ಕಾರಕ್ಕೆ ಸೇರಿದ; ಅಥವಾ

(ii) ಅವನ ಒಡೆತನದಲ್ಲಿರುವ ಒಂದು ರೆವಿನ್ಯೂ ನಿವೇಶನವಾಗಿರುವ; ಅಥವಾ

(iii) ಅವನಿಗೆ ಸೇರಿದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ 17ನೇ ಪ್ರಕರಣದ ಅಡಿಯಲ್ಲಿ ಅಥವಾ ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976ರ 15ನೇ ಪ್ರಕರಣದ ಅಡಿಯಲ್ಲಿ ಒಂದು ಪ್ರಾಧಿಕಾರದ ಯಾವುದೇ ಅಭಿವೃದ್ಧಿ ಯೋಜನೆಯ ಸಂಬಂಧದಲ್ಲಿ ಆರ್ಜಿಸಬೇಕೆಂದು ಪ್ರಸ್ತಾವಿಸಲಾದ ಭೂಮಿಯ ಸಂಬಂಧದಲ್ಲಿ, ಒಂದು ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಯಾವ ಪ್ರಾಧಿಕಾರಕ್ಕಾಗಿ ಆರ್ಜನೆಯನ್ನು ಪ್ರಸ್ತಾವಿಸಲಾಗಿತ್ತೋ ಆ ಯಾವುದೇ ಪ್ರಾಧಿಕಾರದಲ್ಲಿ ಇನ್ನೂ ನಿಹಿತಗೊಂಡಿರದ,

- ಯಾವುದೇ ನಗರ ಪ್ರದೇಶದಲ್ಲಿ ರಚಿಸಲಾದ ಯಾವುದೇ ಅನಧಿಕೃತ ನಿರ್ಮಾಣವನ್ನು, ಅಂಥ ವ್ಯಕ್ತಿಯು [1][1995ರ ಡಿಸೆಂಬರ್ ಮೂವತ್ತೊಂದನೇ ದಿನಾಂಕಕ್ಕೆ ಮುಂಚೆ][1] ಸಲ್ಲಿಸಿದ ಅರ್ಜಿಯ ಮೇಲೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಕ್ರಮಗೊಳಿಸಬಹುದು.

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಸೇರಿಸಲಾಗಿದೆ.

**4. ಸಕ್ರಮಗೊಳಿಸಬಾರದ ಅನಧಿಕೃತ ನಿರ್ಮಾಣಗಳು.**- ಈ ಮುಂದಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸತಕ್ಕದ್ದಲ್ಲ, ಎಂದರೆ:-

(i) [1][ಈಗಿರುವ ಅಥವಾ ಅಗಲ ಮಾಡಲು ಪ್ರಸ್ತಾವಿಸಿರುವ ರಸ್ತೆಗಳೂ ಸೇರಿದಂತೆ ಪ್ರಸ್ತಾವಿತ ರಸ್ತೆಗಳು]1 ಮತ್ತು ರೈಲು ಮಾರ್ಗಗಳು, ಸಂಪರ್ಕ ಮಾರ್ಗಗಳು ಮತ್ತು ಇತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಉಪಯುಕ್ತತೆಗಳಿಗೆ ಅಡ್ಡವಾಗಿ ಬರುತ್ತಿರುವ ಅನಧಿಕೃತ ನಿರ್ಮಾಣಗಳು.;

[2][(ii) x x x][2]

(iii) ಅರಣ್ಯ ಭೂಮಿಯಲ್ಲಿ ಅಥವಾ ಕೆರೆ ದಂಡೆಯ ಮೇಲೆ ರಚಿಸಲಾದ ಅನಧಿಕೃತ ನಿರ್ಮಾಣಗಳು;

[2][(iv) x x x][2]

(v) ಬೇರೊಬ್ಬ ವ್ಯಕ್ತಿಗೆ ಸೇರಿದ್ದು, ತನಗೆ ಹಕ್ಕಿಲ್ಲದ ಭೂಮಿಯ ಮೇಲೆ ಒಬ್ಬ ವ್ಯಕ್ತಿಯು ರಚಿಸಿದ ಅನಧಿಕೃತ ನಿರ್ಮಾಣಗಳು;

[2][(vi) x x x][2]

(vii) ನಗರ (ಭೂ ಪರಿಮಿತಿ ಮತ್ತು ವಿನಿಯಮನ) ಅಧಿನಿಯಮ, 1976 (1976ರ ಕೇಂದ್ರಾಧಿನಿಯಮ 33)ರ ಉಲ್ಲಂಘನೆಯಲ್ಲಿ ರಚಿಸಲಾದ ಅನಧಿಕೃತ ನಿರ್ಮಾಣಗಳು;

[3][(viiJ) ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ರಾಜ್ಯ ಸರ್ಕಾರಕ್ಕೆ ಸೇರಿದ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಭೂಮಿಯ ಮೇಲಿನ ಅನಧಿಕೃತ ನಿರ್ಮಾಣಗಳು;

[1][(viiಬಿ) ಕೇಂದ್ರ ಸರ್ಕಾರಕ್ಕೆ ಸೇರಿದ ಭೂಮಿಯ ಮೇಲಿರುವ ಅನಧಿಕೃತ ನಿರ್ಮಾಣಗಳು;][1]

(viiಸಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಒಡೆತನ ಅಥವಾ ನಿಯಂತ್ರಣ ಹೊಂದಿರುವ ಯಾವುದೇ ಕಂಪನಿಯ ಒಡೆತನದಲ್ಲಿರುವ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಭೂಮಿಯ ಮೇಲೆ ನಿರ್ಮಿಸಲಾದ ಅನಧಿಕೃತ ನಿರ್ಮಾಣಗಳು;]3

(viii) ಯಾವುದೇ ಪ್ರಾಧಿಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರಲ್ಲಿ ನಿಹಿತವಾದ ಭೂಮಿಯ ಮೇಲೆ ರಚಿಸಲಾದ ಅನಧಿಕೃತ ನಿರ್ಮಾಣಗಳು; ಮತ್ತು

(ix) ಉದ್ಯಾನವನಗಳು, ಆಟದ ಮೈದಾನಗಳು, ಬಹಿರಂಗ ಸ್ಥಳಗಳು ಅಥವಾ ಯಾವುದೇ ನಾಗರಿಕ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಮೀಸಲಿರಿಸಲಾದ ಯಾವುದೇ ಭೂಮಿಯ ಮೇಲೆ ರಚಿಸಲಾದ ಅನಧಿಕೃತ ನಿರ್ಮಾಣಗಳು.

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 1.8.1992 ರಿಂದ ಪ್ರತಿಯೋಜಿಸಲಾಗಿದೆ.

2. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 1.8.1992 ರಿಂದ ಬಿಟ್ಟುಬಿಡಲಾಗಿದೆ.

3. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಸೇರಿಸಲಾಗಿದೆ.

**5. ಸಕ್ರಮಗೊಳಿಸುವುದಕ್ಕೆ ಷರತ್ತುಗಳು.-** (1) ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನು ಸಕ್ರಮಗೊಳಿಸಬೇಕೆಂದು ಕೋರಲಾದ ಅನಧಿಕೃತ ನಿರ್ಮಾಣವಿರುವ ನಗರ ಪ್ರದೇಶದೊಳಗೆ ಯಾವುದೇ ಕಟ್ಟಡ

ಅಥವಾ ನಿವೇಶನದ ಒಡೆತನವನ್ನು ಹೊಂದಿದ್ದರೆ, ಅಂಥ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯು ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಬೇಕೆಂದು ಕೋರಲು ಅರ್ಹನಿರತಕ್ಕದ್ದಲ್ಲ.

[1][**6. ಸಕ್ಷಮ ಪ್ರಾಧಿಕಾರಿ.-** (1) ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚನೆ ನೀಡುವ ಮೂಲಕ ಕೆ.ಎ.ಎಸ್. ಗ್ರೂಪ್-ಎ ಹಿರಿಯ ವೇತನ ಶ್ರೇಣಿಯ ಅಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯೊಬ್ಬರನ್ನು ಸಕ್ಷಮ ಪ್ರಾಧಿಕಾರಿಯೆಂದು, ಅದು ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ ಅಥವಾ ಪ್ರದೇಶಗಳಿಗೆ ನೇಮಕ ಮಾಡಬಹುದು ಮತ್ತು ಒಂದೇ ಪ್ರದೇಶಕ್ಕೆ ಎರಡು ಅಥವಾ ಹೆಚ್ಚು ಸಕ್ಷಮ ಪ್ರಾಧಿಕಾರಿಗಳನ್ನು ನೇಮಕ ಮಾಡಬಹುದು.

(2) ಸಕ್ಷಮ ಪ್ರಾಧಿಕಾರಿಯು, 3ನೇ ಪ್ರಕರಣದ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಈ ಮುಂದೆ ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಹಣ ಸಂದಾಯ ಮಾಡುವುದಕ್ಕೊಳಪಟ್ಟು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಬಗ್ಗೆ ತಾತ್ಕಾಲಿಕ ಆದೇಶ ನೀಡತಕ್ಕದ್ದು ಮತ್ತು ಅಂಥ ನಿರ್ಮಾಣವು ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಮೇಲೆ ನಿರ್ಮಾಣವಾಗಿದ್ದಲ್ಲಿ ನಿರ್ಮಾಣವನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ಗರಿಷ್ಠ ವಿಸ್ತೀರ್ಣಕ್ಕೊಳಪಟ್ಟು ಸದರಿ ನಿರ್ಮಾಣಕ್ಕೆ ಸೇರಿರುವ ಹಾಗೂ ಅದಕ್ಕೆ ಹೊಂದಿಕೊಂಡಿರುವ ಭೂಮಿಯನ್ನು ನೀಡಲು ಸಹ ತಾತ್ಕಾಲಿಕ ಆದೇಶವನ್ನು ನೀಡತಕ್ಕದ್ದು.

(3) 1995ರ ಜನವರಿ ಒಂದನೇ ದಿನಕ್ಕಿಂತಲೂ ಮೊದಲೇ ಅನಧಿಕೃತ ನಿರ್ಮಾಣವನ್ನು ಮಾಡಲಾಗಿತ್ತು ಎಂಬುದನ್ನು ರುಜುವಾತು ಪಡಿಸುವುದು ಅಂಥ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಕೋರುವ ಅರ್ಜಿದಾರನ ಹೊಣೆಯಾಗಿರತಕ್ಕದ್ದು.][1]

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಪ್ರತಿಯೋಜಿಸಲಾಗಿದೆ.

**7. ಮೊಬಲಗಿನ ಸಂದಾಯ ಮತ್ತು ಭೂಮಿಯ ನೀಡಿಕೆ.-** (1) [1][ಸಕ್ಷಮ ಪ್ರಾಧಿಕಾರಿಯಿಂದ][1] [2][ಸಕ್ರಮಗೊಳಿಸುವ ತಾತ್ಕಾಲಿಕ ಆದೇಶವನ್ನು][2] ಸ್ವೀಕರಿಸಲಾದ ದಿನಾಂಕದಿಂದ ಎರಡು ತಿಂಗಳೊಳಗಾಗಿ ನಿಯಮಿಸಬಹುದಾದಂಥ ಮೊಬಲಗನ್ನು, ಯಾವ ವ್ಯಕ್ತಿಯ ಪರವಾಗಿ ಅಂಥ ಆದೇಶವನ್ನು ಮಾಡಲಾಗಿದೆಯೋ ಅವನು ಸಂದಾಯ

ಮಾಡತಕ್ಕದ್ದು. ವಿವಿಧ ನಗರ ಪ್ರದೇಶಗಳು ಅಥವಾ ವ್ಯಕ್ತಿಗಳ ವರ್ಗ ಅಥವಾ ವರ್ಗಗಳ ಸಂಬಂಧದಲ್ಲಿ ಬೇರೆ ಬೇರೆ ಮೊಬಲಗನ್ನು ನಿಯಮಿಸಬಹುದು.

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ-ಪ್ರಕರಣಕ್ಕನುಸಾರವಾಗಿ ಮೊಬಲಗನ್ನು ಸಂದಾಯ ಮಾಡಿದ ಮೇಲೆ,-

(i) ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಸಂದರ್ಭದಲ್ಲಿ [1][ಸಕ್ಷಮ ಪ್ರಾಧಿಕಾರಿಯು ತಾತ್ಕಾಲಿಕವಾಗಿ, ಸಕ್ರಮಗೊಳಿಸಲು ಆದೇಶಿಸಲಾದ ಭೂಮಿಯನ್ನು ನೀಡಿದ ಬಗ್ಗೆ ಅಂತಿಮ ಆದೇಶ ನೀಡತಕ್ಕದ್ದು]1 ಮತ್ತು ಅಂಥ ನೀಡಿಕೆಯ ತರುವಾಯ, ಭೂಮಿಯನ್ನು ಪಡೆದವನು ತನ್ನ ಹೆಸರಿನಲ್ಲಿ, ತನ್ನ ಖರ್ಚಿನಲ್ಲಿ ಅಂಥ ಭೂಮಿಯ ಬಗ್ಗೆ ಮಾರಾಟ ಪತ್ರವನ್ನು ಬರೆಸಿಕೊಳ್ಳಲು ಹಕ್ಕುಳ್ಳವನಾಗತಕ್ಕದ್ದು ಮತ್ತು ತದನಂತರ, ಅಲ್ಲಿ ಇರುವ ಅನಧಿಕೃತ ನಿರ್ಮಾಣವನ್ನು 2[ಸಕ್ರಮಗೊಳಿಸತಕ್ಕದ್ದು]2

(ii) (i)ನೇ ಖಂಡದ ಅಡಿಯಲ್ಲಿ ಬರದ ಸಂದರ್ಭಗಳಲ್ಲಿ, ಅನಧಿಕೃತ ನಿರ್ಮಾಣವನ್ನು [2][ಸಕ್ರಮಗೊಳಿಸತಕ್ಕದ್ದು][2].

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಪ್ರತಿಯೋಜಿಸಲಾಗಿದೆ.

**8. ಸಕ್ರಮಗೊಳಿಸದ ಅನಧಿಕೃತ ನಿರ್ಮಾಣವನ್ನು ಕೆಡವಬೇಕು.-** ಈ ಅಧಿನಿಯಮದ ಅಡಿಯಲ್ಲಿ ಸಕ್ರಮಗೊಳಿಸಿರದ ಎಲ್ಲ ಅನಧಿಕೃತ ನಿರ್ಮಾಣಗಳು ಕೆಡಹುವಿಕೆಗೆ ಬದ್ದವಾಗತಕ್ಕದ್ದು ಮತ್ತು 1[ನೋಟೀಸು ಜಾರಿಗೊಳಿಸದೆ ನೀರು ಸರಬರಾಜು ಅಥವಾ ವಿದ್ಯುಚ್ಛಕ್ತಿ ಸರಬರಾಜನ್ನು ತೆಗೆದು ಹಾಕುವುದಕ್ಕೆ ಬದ್ಧವಾಗತಕ್ಕದ್ದು]1 ಅಂಥ ನಿರ್ಮಾಣಗಳನ್ನು ಮಾಡಿದ ವ್ಯಕ್ತಿಗಳು ಸುಸಂಗತ ಕಾನೂನಿಗನುಸಾರವಾಗಿ ಕ್ಷಿಪ್ರವಾಗಿ ಹೊರದೂಡುವಿಕೆಗೆ ಬದ್ಧರಾಗಿರತಕ್ಕದ್ದು.

1. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಸೇರಿಸಲಾಗಿದೆ.

[1][**8ಎ. [2][ಪ್ರಾದೇಶಿಕ ಕಮೀಷನರಿಂದ][2] ಪರಿಶೀಲನೆ.-** ಸಕ್ಷಮ ಪ್ರಾಧಿಕಾರಿಯು ಹೊರಡಿಸಿದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅಥವಾ ದಾಖಲಿಸಿದ ವ್ಯವಹರಣೆಯ ಸೂಕ್ತತೆಯ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಸಂಬಧಪಟ್ಟ ರೆವಿನ್ಯೂ ವಿಭಾಗದ [2][ಪ್ರಾದೇಶಿಕ ಕಮೀಷನರ್,][2] ತಾನೇ ಸ್ವತಃ ಅಥವಾ ಯಾವೊಬ್ಬ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಸಕ್ಷಮ ಪ್ರಾಧಿಕಾರಿಯು ಹೊರಡಿಸಿದ ಆದೇಶವನ್ನು ಅಥವಾ ದಾಖಲು ಮಾಡಿದ ಅಂಥ ವ್ಯವಹರಣೆಯನ್ನು ಯಾವುದೇ ಸಮಯದಲ್ಲಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

ಪರಂತು, ಅಂಥ ಯಾವುದೇ ಆದೇಶವನ್ನು ಅದರಿಂದ ಬಾಧಿತನಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.]1

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಪ್ರತಿಯೋಜಿಸಲಾಗಿದೆ.
2. 2007ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ 5.1.2007ರಿಂದ ಪ್ರತಿಯೋಜಿಸಲಾಗಿದೆ.

**9. ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವ ಉದ್ದೇಶಕ್ಕಾಗಿ ಪೂರ್ವ ಪ್ರಕಟಣೆ ತರುವಾಯ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು,-

(ಎ) 6ನೇ ಪ್ರಕರಣದ [1][(2)ನೇ ಉಪ-ಪ್ರಕರಣದ][1] ಅಡಿಯಲ್ಲಿ ನಡೆಸಬೇಕಾದ ವಿಚಾರಣೆಯ ರೀತಿ;

[2][(ಬಿ) [1][ಸಕ್ಷಮ ಪ್ರಾಧಿಕಾರಿಯ][1] ಅಧಿಕಾರಗಳು ಮತ್ತು ಕರ್ತವ್ಯಗಳು;

[3][ (ಸಿ) x x x][3]

(ಡಿ) 7ನೇ ಪ್ರಕರಣದ 2ನೇ ಉಪಪ್ರಕರಣದ ಅಡಿಯಲ್ಲಿ ಕ್ರಯಪತ್ರವನ್ನು ಬರೆದು ಕೊಡಬೇಕಾದ ಅವಧಿ;][2]

4[(ಇ)]4 7ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗು;

4[(ಎಫ್)]4 ಈ ಅಧಿನಿಯಮದ ಅಡಿಯಲ್ಲಿ ರಚಿಸಬೇಕಾದ ನಿಯಮಗಳು ಅಥವಾ ಅಗತ್ಯವಿರುವ
ಯಾವುದೇ ಇತರ ವಿಷಯ,

-ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

1. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಪ್ರತಿಯೋಜಿಸಲಾಗಿದೆ.
2. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಸೇರಿಸಲಾಗಿದೆ.
3. 1995ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿನಾಂಕ: 3.6.1995 ರಿಂದ ಬಿಟ್ಟುಬಿಡಲಾಗಿದೆ.
4. 1994ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 1.8.1992 ರಿಂದ ಮರು ಅಕ್ಷರ ನೀಡಲಾಗಿದೆ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿರುವಾಗ

ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ನಿಯಮಗಳನ್ನು

ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ, ತದನಂತರ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**10. ತೊಂದರೆಗಳ ನಿವಾರಣೆ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ತೊಂದರೆ ನಿವಾರಣೆಗಾಗಿ ಅಗತ್ಯವೆಂದು ಅಥವಾ ಯುಕ್ತವೆಂದು ತೋರುವ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಅಂಥ ಉಪಬಂಧಗಳನ್ನು ಕಲ್ಪಿಸಬಹುದು.

* * * *

**ಅಧಿಸೂಚನೆ**

(See notification in English)